

“ಉಸ್ತಾದ್, ನನಗೂ, ನನಗೂ...”

ಮರೆಯಲಾಗದ ಘಟನೆ ಇದೊಂದೂ ಅಲ್ಲ, ನನ್ನ ಸ್ಲೇಟಿನಲ್ಲಿ ಉಸ್ತಾದ್ ಬಿಡಿಸಿದ್ದು ಯೇಸು ಕ್ರಿಸ್ತನ ಚಿತ್ರ. ನೋವುಂಡ ಮುಖದ ಯೇಸು. ವಿಚಿತ್ರವೆಂದರೆ, ಚಿತ್ರದ ಯೇಸುವಿನ ಮುಖ ಉಸ್ತಾದರನ್ನೇ ಹೋಲುತ್ತಿತ್ತು.

ಮಕ್ಕಳ ನಗು ಮತ್ತು ಗದ್ದಲ ಕೇಳಿ ಸದರ್ ಉಸ್ತಾದರೂ ಆಗಿದ್ದ ಖತೀಬರು ಮಮ್ಮುಮುಕ್ರಿಯ ಕ್ಲಾಸಿನ ಬಳಿ ಬಂದರು.

“ಮಮ್ಮು ಉಸ್ತಾದರೇ, ಏನಿದು ಗಲಾಟೆ?”

ಗಡಿಬಿಡಿಯಲ್ಲಿ ಸ್ಲೇಟುಗಳನ್ನೆಲ್ಲ ಮಗುಚಿಡುತ್ತಾ ಮಮ್ಮುಮುಕ್ರಿ ಹೇಳಿದರು: